# ಆಕಾಶದೂರಿನ ಜಾತ್ರೆ

■ **ಚಂದನ ಜಿ.ಪಿ., ಹೊನ್ನಾಳಿ**

ನಿದ್ದೆಯು ಬಾರದೇ ಕುಳಿತಿರಲು
ಬಾನಲಿ ನಕ್ಕನು ಚಂದಮಾಮ
ಆಕಾಶದೂರಲಿ ಹಬ್ಬದ ಸಂಭ್ರಮ
ಬರುವೆಯಾ ಎಂದನು ಚಂದಮಾಮ

ಅಮ್ಮ ಅಪ್ಪ ಮಲಗಿಹರು
ಅಜ್ಜಿಯ ಗೊರಕೆ ಬಲು ಜೋರು
ಎಲ್ಲರೂ ಏಳುವ ಮುನ್ನವೇ ನಿನ್ನ
ಬಂದು ಬಿಡುವೆನು ಹೆದರದಿರು

ಚಂದಮಾಮನ ಪಲ್ಲಕ್ಕಿ ಏರಿದೆ
ಮೇಲಕೆ ಮೇಲಕೆ ಮತ್ತೂ ಮೇಲಕೆ
ಮೋಡವ ಸೀಳುತ ತೇಲಿತು ಮೆಲ್ಲಕೆ
ನಲಿಯುತ ಹೆದರುತ ಹಾಕಿದೆ ಕೇಕೆ

ಜಾತ್ರೆಯ ತಲುಪಲು ಸುತ್ತಲೂ ನೆರೆದರು
ಮಿನುಮಿನು ಮಿನುಗುವ ತಾರೆಯರು
ಅಶ್ವಿನಿ ಭರಣಿ ರೋಹಿಣಿ ಕೃತಿಕಾ
ರೇವತಿ ಸ್ವಾತಿ ಇನ್ನೂ ಅನೇಕ

ತಾರೆಯರ ಮನೆಯ ಊಟಕೆ ಹೋದೆ
ಹೋಳಿಗೆತುಪ್ಪ ಪಾಯಸ ಕಜ್ಜಾಯ
ಕಡುಬು ಪೇಡೆ ಬಗೆಬಗೆ ಉಂಡೆಯ
ಸಾಕು ಬೇಕೆಂದು ಚಪ್ಪರಿಸಿ ತಿಂದೆ

ತೇರಿನ ಸಮಯವು ಬಂದೇ ಬಿಟ್ಟಿತು
ಜಗನ್ಮಾತೆಯೇ ತೇರಲಿ ಕುಳಿತಿಹಳು
ತ್ರಿಮೂರ್ತಿಯರು ತೇರ ಎಳೆದಿಹರು
ದೇವಾದಿ ದೇವರ ಝೇಂಕಾರ ಮೊಳಗಿತು

ಮುಂದಿನ ತಿಂಗಳು ಮತ್ತೆ ಬರುವ
ಹೊರಡೋಣ ಎಂದನು ಚಂದಮಾಮ
ಒಲ್ಲದ ಮನಸಲಿ ಮರಳಿದೆನು
ಜಾತ್ರೆಯ ನೆನೆಯುತ ಮಲಗಿದೆನು ■



ಶಶಿಧರ್ ಹಳೇಮನಿ

# ಅಂಧಾನುಕರಣೆ ಸಲ್ಲದು

■ **ಪ.ನಾ. ಹಳ್ಳಿ ಹರೀಶ್ ಕುಮಾರ್**



ಶಶಿಧರ್ ಹಳೇಮನಿ

ಸಾಧುವೊಬ್ಬರು ತಮ್ಮ ಶಿಷ್ಯರೊಂದಿಗೆ ಪರ್ಯಟಣೆ ಹೊರಟಿದ್ದರು. ಕಾಲ್ನಡಿಗೆಯಲ್ಲಿ ಸಂಚರಿಸುತ್ತಾ ದಾರಿಯುದ್ದಕ್ಕೂ ಸಿಗುತ್ತಿದ್ದ ಹಳ್ಳಿಗಳಲ್ಲಿ ಊಟೋಪಚಾರ ಮುಗಿಸಿ ವಿಶ್ರಾಂತಿ ಪಡೆದು ಮುಂದುವರೆಯುತ್ತಿದ್ದರು. ಒಮ್ಮೆ ಹೀಗೇ ಸಂಚರಿಸುತ್ತಿರುವಾಗ ದಾರಿಮಧ್ಯೆ ಒಂದು ತೊರೆಯನ್ನು ದಾಟಬೇಕಾಯಿತು. ಅಲ್ಲಿ ಸಾಧುವು ಅನೇಕ ಮೀನುಗಳನ್ನು ಕಂಡರು. ಕೂಡಲೇ ಅವರು ಒಂದೊಂದೇ ಮೀನುಗಳನ್ನು ಹಿಡಿದು ತಮ್ಮ ಬಾಯೊಳಗೆ ಹಾಕಿಕೊಳ್ಳತೊಡಗಿದರು. ಇದನ್ನು ಗಮನಿಸಿದ ಅವರ ಶಿಷ್ಯರೂ ಸಹ ತಮ್ಮ ಗುರುಗಳನ್ನು ಅನುಸರಿಸಿ ತಾವೂ ಸಹ ಮೀನುಗಳನ್ನು ಹಿಡಿದು ಬಾಯೊಳಗೆ ಹಾಕಿಕೊಳ್ಳತೊಡಗಿದರು. ಹತ್ತಾರು ಸಣ್ಣ ಮೀನುಗಳನ್ನು ಹಿಡಿದು ಬಾಯೊಳಗೆ ಹಾಕಿಕೊಂಡ ನಂತರ ಸಾಧುವು ಸಾಧ್ಯವಾದಷ್ಟು ನೀರನ್ನು ಬಾಯೊಳಗೆ ತುಂಬಿಕೊಂಡು ಮುನ್ನಡೆದರು. ಅವರ ಶಿಷ್ಯರೂ ಸಹ ಅದೇ ರೀತಿ ಮಾಡಿದರು. ಎಲ್ಲವನ್ನೂ ಗಮನಿಸಿದ ಸಾಧುಗಳು ಏನೊಂದನ್ನೂ ಮಾತನಾಡದೇ ಮುಂದೆ ಸಾಗಿದರು.

ದಾರಿಯಲ್ಲಿ ಮುಂದೊಂದು ಕೆರೆ ಸಿಕ್ಕಿತು. ಅಲ್ಲಿ ನಿಂತ ಸಾಧುಗಳು ಕೆರೆಯಲ್ಲಿ ಮೀನುಗಳಿಲ್ಲದ್ದನ್ನು ಗಮನಿಸಿ ತಾವು ಬಾಯೊಳಗೆ ತುಂಬಿಕೊಂಡಿದ್ದ ಮೀನುಗಳನ್ನು ಒಂದೊಂದಾಗಿ ಹೊರಗೆ ಉಗುಳತೊಡಗಿದರು. ಸಾಧುವಿನ ಬಾಯೊಳಗಿಂದ ಹೊರಬಂದ ಮೀನುಗಳು ಜೀವಂತವಾಗಿದ್ದು ಕೆರೆಯ ನೀರಿನೊಡನೆ ಸೇರಿ ಈಜುತ್ತಾ ಕಣ್ಮರೆಯಾದವು. ಇದನ್ನು ಗಮನಿಸಿದ ಶಿಷ್ಯರೂ ಸಹ ಮೀನುಗಳನ್ನು ಬಾಯೊಳಗಿನಿಂದ ಹೊರತೆಗೆಯಲು ಪ್ರಯತ್ನಿಸಿದರು. ಆದರೆ ಅದು ಸಾಧ್ಯವಾಗಲೇ ಇಲ್ಲ. ಅವರೆಲ್ಲಾ ಮೀನುಗಳನ್ನು ಹೊಟ್ಟೆಯೊಳಗೆ ನುಂಗಿಬಿಟ್ಟಿದ್ದರು. ಬಹಳ ಪರಿಶ್ರಮ ಪಟ್ಟ ನಂತರ ಕೆಲವೊಂದಿಷ್ಟು ಮೀನುಗಳನ್ನು ವಾಂತಿಮಾಡಿಕೊಂಡರು. ದುರದೃಷ್ಟವಶಾತ್ ಆ ಮೀನುಗಳೆಲ್ಲವೂ ಸಾವನ್ನಪ್ಪಿದ್ದವು. ಶಿಷ್ಯರ ಈ ವರ್ತನೆಗಳನ್ನೆಲ್ಲಾ ಗಮನಿಸಿದ ಸಾಧುವು ಶಿಷ್ಯರಿಗೆ ಸರಿಯಾಗಿ ಅರ್ಥೈಸಿಕೊಳ್ಳದೇ ಯಾರನ್ನೂ ಅಥವಾ ಯಾವುದನ್ನೂ ಅನುಕರಿಸಬಾರದು ಎಂದು ಬುದ್ಧಿಹೇಳಿದರು. ಶಿಷ್ಯರಿಗೆ ತಮ್ಮ ತಪ್ಪಿನ ಅರಿವಾಗಿ ತಲೆತಗ್ಗಿಸಿ ಕ್ಷಮೆಯಾಚಿಸಿದರು. ■